ಕಾರ್ಯದರ್ಶಿ;—ಕರ್ನಾಟಕ ವಿಧಾನ ಪರಿಷತ್ತಿನಿಂದ ಅಂಗೀಕಾರವಾದ ರೂಪದಲ್ಲಿರುವ ೧೯೮೮ನೇ ಇಸವಿಯ ಕರ್ನಾಟಕ ಕಾನೂನು ನೆರವು ಮಂಡಳಿಯ ವಿಧೇಯಕವನ್ನು ಸಭೆಯ ಮುಂದಿಡುತ್ತೇನೆ

ಉಪಾಧ್ಯಕ್ಷರು;—ಕಾಗದ ಪತ್ರಗಳನ್ನು ಮಂಡಿಸಲಾಯಿತು.

ಗಮನ ಸೆಳೆಯುವ ಸೂಚನೆ

೧) ಹಾನಗಲ್ ತಾಲ್ಲೂಕಿನ ಶೇಷಗಿರಿಯಲ್ಲಿ ಹಿಂದುಳಿದ ವರ್ಗದವರಿಗೆ ಹಾಸ್ಟಲನ್ನು ಮಂಜೂರು ಮಾಡುವಲ್ಲಿ ವಿಳಂಬವಾಗಿರುವುದು.

ಶ್ರೀ ಕೆ. ಹೆಚ್. ಪಾಟೀಲ್.—ಧಾರವಾಡ ಜಿಲ್ಲೆಯ ಹಾನಗಲ್ ತಾಲ್ಲೂಕು ಶೇಷಗಿರಿಯಲ್ಲಿ ಹಿಂದುಳಿದ ವರ್ಗದವರಿಗಾಗಿ ಹಾಸ್ಟೆಲ್‌ನ್ನು ಮಂಜೂರು ಮಾಡುವಲ್ಲಿ ಆಗಿರುವ ವಿಳಂಬದ ಬಗ್ಗೆ ಸಮಾಜ ಕಲ್ಯಾಣ ಮಂತ್ರಿಯವರ ಗಮನ ಸೆಳೆಯುತ್ತೇನೆ.

ಶ್ರೀ ಜಿ. ಬಸವಣ್ಣಪ್ಪ (ಸಮಾಜ ಕಲ್ಯಾಣ ಸಚಿವರು)—ಮಾನ್ಯ ಪಾಟೀಲ್‌ರವರು ಧಾರವಾಡ ಜಿಲ್ಲೆಯಲ್ಲಿ ಹಾನಗಲ್ ತಾಲ್ಲೂಕಿನ ಶೇಷಗಿರಿಯಲ್ಲಿ ಗ್ರಾಂಟ್ ಇನ್ ಏಡ್ ಹಾಸ್ಟೆಲ್‌ನ್ನು ಹಿಂದುಳಿದ ವರ್ಗಗಳವರ ಮಕ್ಕಳಿಗಾಗಿ ಮಂಜೂರು ಮಾಡಬೇಕೆಂದು ಬಹಳ ದಿವಸಗಳಿಂದ ಕೇಳುತ್ತಿದ್ದೇನೆಂದು ಹೇಳಿದ್ದಾರೆ. ಆ ಬಗ್ಗೆ ಈಗಾಗಲೇ ಕ್ರಮ ತೆಗೆದುಕೊಂಡಿದ್ದೇನೆ. ಆದಷ್ಟು ಬೇಗ ಹಿಂದುಳಿದ ವರ್ಗಗಳವರ ಮಕ್ಕಳಿಗೆ ಅನುಕೂಲವಾಗುವಂತೆ ಖಾಸಗಿ ಅನುದಾನ ವಿದ್ಯಾರ್ಥಿನಿಲಯವನ್ನು ಕೊಡಲಾಗುತ್ತದೆ.

ಶ್ರೀ ಎ. ಲಕ್ಷ್ಮೀಸಾಗರ್.—ಶ್ರೀ ಡಿ. ಟಿ. ಜಯಕುಮಾರ್, ಚಿಕ್ಕಬೋರಯ್ಯ ಹಾಗೂ ವೇದಾಂತ ಹೆಬ್ಬಿಗೆಯವರು ಗಮನ ಸೆಳೆದಿರುವ ವಿಚಾರವನ್ನು ಮಂತ್ರಿಗಳು ಬಂದ ಮೇಲೆ ತೆಗೆದುಕೊಳ್ಳಿ.

೨) ನಗರ ಯೋಜನೆಯ ಇಲಾಖೆಯಲ್ಲಿ ಖಾಲಿಯಿರುವ ಹುದ್ದೆಗಳನ್ನು ನೇಮಕಾತಿ ಹಾಗೂ ಬಡ್ತಿ ಮಾಡುವಲ್ಲಿ ನಿಮ್ನ ವರ್ಗದವರಿಗೆ ಅನ್ಯಾಯವಾಗಿರುವುದು.

ಶ್ರೀ ಬಿ. ಬಸವಲಿಂಗಪ್ಪ.—ಕರ್ನಾಟಕ ರಾಜ್ಯದ ನಗರ ಯೋಜನೆಯ ಇಲಾಖೆಯಲ್ಲಿ ಖಾಲಿಯಿರುವ ಹುದ್ದೆಗಳನ್ನು ನೇಮಕಾತಿ ಮಾಡುವಲ್ಲಿ ಹಾಗೂ ಬಡ್ತಿ ನೀಡುವಲ್ಲಿ ನಿಮ್ನ ವರ್ಗದ ಹಾಗೂ ಪಂಗಡದವರಿಗೆ ಆದ ಅನ್ಯಾಯದ ಬಗ್ಗೆ ನಗರಾಭಿವೃದ್ಧಿ ಹಾಗೂ ಲೋಕೋಪಯೋಗಿ ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

ಶ್ರೀ ಎಂ. ಚಂದ್ರಶೇಖರ್ (ಲೋಕೋಪಯೋಗಿ ಹಾಗೂ ನಗರಾಭಿವೃದ್ಧಿ ಸಚಿವರು).—

೧. ನಗರ ಯೋಜನಾ ಇಲಾಖೆಯಲ್ಲಿ ಖಾಲಿ ಹುದ್ದೆಗಳ ನೇಮಕಾತಿ :

ಸರ್ಕಾರಿ ಆದೇಶದ ಕ್ರ ಸಂ. ಡಿಪಿಎಆರ್-೧-ಎಸ್‌ಬಿಸಿ-೭೭, ದಿನಾಂಕ ೪-೩-೧೯೭೭ ಅನ್ವಯ ಈ ಇಲಾಖೆಯಲ್ಲಿ ಖಾಲಿ ಬಿದ್ದ ಹುದ್ದೆಗಳನ್ನು ನಿಮ್ನ ವರ್ಗ ಮತ್ತು ಇತರ ವರ್ಗಗಳಿಗೆ ನಿರ್ಧರಿಸಿದ ಮೀಸಲಾತಿಯ ವಿಂಗಡಿಸಿ, ಕರ್ನಾಟಕ ಲೋಕಸೇವಾ ಆಯೋಗ ಹಾಗೂ ನೇಮಕಾತಿ ಸಮಿತಿಗಳಿಗೆ ಅಭ್ಯರ್ಥಿಗಳನ್ನು ಆಯ್ಕೆ ಮಾಡಿ. ಅರ್ಹರಾದ ಅಭ್ಯರ್ಥಿಗಳ ಪಟ್ಟಿಯ ಅನ್ವಯ ನೇಮಕಾತಿ ಮಾಡಲಾಗಿದೆ. ಅದೇ ರೀತಿ 'ಡಿ' ದರ್ಜೆಗೆ ಸೇರಿದ ಹುದ್ದೆಗಳನ್ನು ಸರ್ಕಾರಿ ಆದೇಶದ ದಿನಾಂಕ ೪-೩-೭೭ರ ಅನ್ವಯ ವಿಂಗಡಿಸಿ, ಜಿಲ್ಲಾ ವಿನಿಮಯ ಉದ್ಯೋಗ ಸಂಸ್ಥೆಯಿಂದ ಅರ್ಹರಾದ ಅಭ್ಯರ್ಥಿಗಳನ್ನು ಆಯ್ಕೆ ಮಾಡಿ ನೇಮಕಾತಿ ಮಾಡಲಾಗಿದೆ.

ಆದ್ದರಿಂದ ನಗರ ಯೋಜನಾ ಇಲಾಖೆಯಲ್ಲಿ ಖಾಲಿ ಹುದ್ದೆಗಳ ನೇಮಕಾತಿಯಲ್ಲಿ ಯಾವ ನಿಯಮದ ಉಲ್ಲಂಘನೆ ಮಾಡಿರುವುದಿಲ್ಲ.

೨. ಪುರಬಡ್ತಿ :

ನಗರ ಯೋಜನಾ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಾವಳಿಯ ಹಾಗೂ ಸರ್ಕಾರಿ ಆದೇಶದ ಸಂ. ಡಿಪಿಎಆರ್-೫೯-ಎಸ್‌ಬಿಸಿ-೭೭ ದಿನಾಂಕ ೨೭-೪-೧೯೭೮ ಮತ್ತು ಸಂ. ಡಿಪಿಎಆರ್-೨೨-ಎಸ್‌ಬಿಸಿ-೭೯ ದಿನಾಂಕ ೩೧-೮-೧೯೭೯ರ ಆನ್ವಯ ಬಡ್ತಿಯಿಂದ ತುಂಬಬೇಕಾದ ಹುದ್ದೆಗಳನ್ನು ಮೀಸಲಾತಿ ಪದ್ಧತಿಯನ್ನು ಅನುಸರಿಸಿ ಅರ್ಹರಾದ ಸಿಬ್ಬಂದಿಗೆ ಬಡ್ತಿಯಿಂದ ತುಂಬಬೇಕಾದ ಖಾಲಿ ಹುದ್ದೆಗಳಿಗೆ ಬಡ್ತಿ ನೀಡಲಾಗಿದೆ.

ದಿನಾಂಕ ೧೦-೧೧-೧೯೮೭ರಂದು ಹಿಂದುಳಿದ ವರ್ಗಗಳ ಹಾಗೂ ಅಲ್ಪಸಂಖ್ಯಾತರ ನಿರ್ದೇಶನಾಲಯ ಇವರಿಂದ ಈ ಕಛೇರಿಯಲ್ಲಿ ಖಾಲಿ ಹುದ್ದೆಗಳ ನೇಮಕಾತಿ ಹಾಗೂ ವಂಬಡ್ತಿಯನ್ನು ಪರಿಶೀಲಿಸಿ ಮೀಸಲಾ ಪದ್ಧತಿಯ ಅನುಪಾತವಾಗಿ ತನಿಖೆ ಮಾಡಿ ವರದಿ ಸಲ್ಲಿಸಿದೆ. ಇದಕ್ಕೆ ಸಂಬಂಧ ಪಟ್ಟ ವರದಿಯ ಉದ್ಧೃತ ಭಾಗ ಕೆಳಗಿನಂತಿದೆ.

i) ಘಟಕ ಕಛೇರಿಯಲ್ಲಿ ತನಿಖೆಗೆ ಸಲ್ಲಿಸಲಾದ ನೇಮಕಾತಿ ಕಡತಗಳು, ರಿಜಿಸ್ಟರ್ ಗಳ ನೋಂದಣಿ ಪುಸ್ತಕ ಮುಂತಾದ ದಾಖಲಾತಿಗಳನ್ನು ಪರಿಶೀಲಿಸಿ ಹಿಂದಿನ ತನಿಖೆಯ ನಂತರ ಮಾಡಿರುವ ನೇಮಕಾತಿಯ ವಿವರಗಳನ್ನು ನಮೂನೆಯಲ್ಲಿ ಭರ್ತಿ ಮಾಡಿ ಈ ಕೂಡ ಲಗತ್ತಿಸಿದೆ. ಈ ವಿವರಗಳನ್ನು ಮೀಸಲಾತಿ ಪದ್ಧತಿಯ ಅನುಸಾರವಾಗಿ ಅವಲೋಕಿಸಿದಾಗ ಹಿಂದುಳಿದ ವರ್ಗಗಳಿಗೆ ಕೊರತೆ ಕಂಡು ಬರುವುದಿಲ್ಲ. ಹೊಸ ರೋಸ್ಟರ್ ಅನುಷ್ಠಾನಕ್ಕೆ ಬಂದ ನಂತರ ನೇಮಕಾತಿಗಳನ್ನು ಮಾಡಿರುವುದಿಲ್ಲ.

ii) ನೇಮಕಾತಿಗಳಿಗೆ ಸಂಬಂಧಿಸಿದ ಸರ್ಕಾರಿ ಸುತ್ತೋಲೆಗಳು, ಆದೇಶಗಳು ಮತ್ತು ಮಾರ್ಗದರ್ಶನಗಳನ್ನು ಕ್ರಮಬದ್ಧವಾಗಿ ನಿರ್ವಹಿಸುವುದರಿಂದ ಮಾರ್ಗದರ್ಶನಗಳ ಕೊರತೆ ಯುಂಟಾಗುವುದಿಲ್ಲ.

iii) ನೇಮಕಾತಿಗಳ ಶಾಖೆಯ ಕಾರ್ಯವೈಖರಿಯು ಪ್ರಗತಿದಾಯಕವಾಗಿದೆ.

ಆದ್ದರಿಂದ ನಗರ ಯೋಜನಾ ಇಲಾಖೆಯಲ್ಲಿ ಖಾಲಿ ಹುದ್ದೆಗಳ ನೇಮಕಾತಿ ಮಾಡುವಲ್ಲಿ ಹಾಗೂ ಬಡ್ತಿ ನೀಡುವಲ್ಲಿ ನಿಮ್ನ ವರ್ಗದ ಹಾಗೂ ಪಂಗಡದವರಿಗೆ ಯಾವ ತರವಾದ ಅನ್ಯಾಯವಾಗಿರುವುದಿಲ್ಲ.

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಉಪಾಧ್ಯಕ್ಷರೆ, ಟೌನ್‌ಪ್ಲಾನಿಂಗ್ ಇಲಾಖೆಯಲ್ಲಿ ಸಂಮಾರು ೪೭ ಹುದ್ದೆಗಳಿಗೆ ನೇಮಕಾತಿಯಾಗಿದೆ. ಎ,ಬಿ,ಸಿ,ಡಿ, ಹುದ್ದೆ ಎಲ್ಲಾ ಸೇರಿಸಿ ನಾನು ಹೇಳಿರುತ್ತಿದ್ದೇನೆ. ೪೭ ಹುದ್ದೆಗಳಿಗೆ ನೇಮಕ ಮಾಡುವಾಗ ಪರಿಶಿಷ್ಟ ವರ್ಗದವರಿಗೆ ಎ,ಬಿ,ಸಿ,ಡಿ, ಹುದ್ದೆಗಳಲ್ಲಿ ಕೇವಲ ೬೨ ಹುದ್ದೆಗಳನ್ನು ಮಾತ್ರ ಕೊಟ್ಟಿದ್ದಾರೆ. ಅವರಿಗೆ ಕಾನೂನು ಬದ್ಧವಾಗಿ ೧೫೧ ಹುದ್ದೆಗಳನ್ನು ಕೊಡಬೇಕಾಗಿತ್ತು, ನೇಮಕಾತಿ ಮಾಡುವಾಗ ಈ ರೀತಿ ಕಡಿಮೆ ಕೊಟ್ಟಿರುವುದು ಸರಿಯೆ ? ಸರಿಯಿಲ್ಲದಿದ್ದರೆ ಕಾನೂನು ಬದ್ಧವಾಗಿ ಕೊಡಬೇಕಾದ ಹುದ್ದೆಗಳನ್ನು ನೇಮಕ ಮಾಡುವಾಗ ಕೊಡಲೇಬೇಕಾಗುತ್ತದೆ. ಡೈರೆಕ್ಟರವರ ವರ್ತನೆಯ ಬಗ್ಗೆ ಪ್ರತಿಭಟನೆ ಮಾಡಿ ದಲಿತ ಸಂಘರ್ಷ ಸಮಿತಿಯವರು ಕಳೆದ ೧೦-೧೫ ದಿವಸಗಳಿಂದ ಸತ್ಯಾಗ್ರಹ ನಡೆಸುತ್ತಿದ್ದಾರೆ. ಅವರ ನಡೆ ನುಡಿಯ ಬಗ್ಗೆ ಕೇಳುವುದು ಬಿಡುವುದು ಬೇರೆ ವಿಚಾರ. ಶ್ರಮಾನ್ ವಂಚಿತವರ್ಗದವರು ದಲಿತ ನೌಕರರ ಬಗ್ಗೆ ಬಹಳ ನಿಷ್ಕೃಷ್ಟತೆಯಿಂದ, ಅವರಿಗೆ ಅನ್ಯಾಯವಾಗುವ ರೀತಿಯಿಂದ ವರ್ತನೆ ಮಾಡುತ್ತಿರುತ್ತಾರೆ. ಯಾರಾದರೂ ಏನಾದರೂ ಕೇಳಿದರೆ ಅವರ ವಿರುದ್ಧ ಕ್ರಮ ತೆಗೆದುಕೊಳ್ಳುತ್ತಿದ್ದಾರೆ. ಅವರ ಬಗ್ಗೆ ಪ್ರತಿಭಟನೆ ಮಾಡಿ ಸತ್ಯಾಗ್ರಹ ಮಾಡುತ್ತಿದ್ದಾರೆ.

ಇದರ ಬಗ್ಗೆ ತಾವೇನೋ ಘೋಷಣೆ ಮಾಡಿದ್ದೀರಿ. ತಮ್ಮಲ್ಲಿರತಕ್ಕ ವರದಿಪ್ರಕಾರ ತಾವು ಹೇಳಿದ್ದು ಸರಿಯೆಂದು ತಾವು ಹೇಳುತ್ತೀರಿ. ಆದರೆ ನಾವು ಹೇಳತಕ್ಕ ವರದಿ ಪ್ರಕಾರ ಅಂದರೆ ಏನು ಆಂಕಿಅಂಶಗಳನ್ನು ಕೊಟ್ಟಿದ್ದೇನೆ, ಆದರ ಪ್ರಕಾರ ನಿಜ ಇದ್ದರೆ ಸರಿಪಡಿಸಲಿಕ್ಕೆ ತಾವು ಪ್ರಯತ್ನ ಪಡುತ್ತೀರಾ ?

ಶ್ರೀ ಎ. ಚಂದ್ರಶೇಖರ್.—ಅಧ್ಯಕ್ಷರೇ, ಅವರಲ್ಲಿರುವ ಪಟ್ಟಿ ನನ್ನಲ್ಲೂ ಇದೆ. ಹಿಂದೆ ಅವರು ಇದ್ದ ಕಾಲದಲ್ಲೇ ಆಗಿರುವ ಪಟ್ಟಿಗಳು ಇವು. ಈ ನಿರ್ದೇಶನಾಲಯ ರಚನೆ ಆದ ಸಮಯದಲ್ಲಿ ಪಿ.ಡ್ಲ್ಯೂ.ಡಿ. ಯಿಂದ ಲೆಂಡ್ ಸರ್ವಿಸ್ ಕೆಗೆದುಕೊಂಡಿದ್ದು ಅವರನ್ನು ಮುಂದೆ ಪರ್ಮನೆಂಟ್ ಮಾಡ

ತಕ್ಕಂಥ ಕಾಲದಲ್ಲಿ ನಗರ ಯೋಜನೆ ಇಲಾಖೆಯಲ್ಲಿ 'ಎ' ವರ್ಗ ಮತ್ತು 'ಬಿ' ವರ್ಗದ ಮೇಲ್ಪಟ್ಟ ಹುದ್ದೆಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪಂಗಡಗಳಲ್ಲಿನ ಜನ ಆಲ್ಲಿ ಅವಕಾಶ ಕಡಿಮೆ ಎಂದು ಆ ಕಾಲದಲ್ಲಿ ಬರಲಿಲ್ಲ. ಇದು ತಪ್ಪುಗೆ ಗೊತ್ತಿರತಕ್ಕಂಥ ವಿಚಾರ ಇದ್ದರಿಂದ ೫೦ ಜನ ಇರಬೇಕಾದದ್ದು, ಆದರಲ್ಲಿ ೩೦ ಪರ್ಮನೆಂಟ್, ಎಸ್. ಸಿ. ೨, ಟೆಂಪರರಿ ಇಲ್ಲ, ಟೋಟಲ್ ಎರಡೇ ಹಾಗೆಯೇ 'ಬಿ'ನಲ್ಲಿ ೩೮ರಲ್ಲಿ ೧ ಮತ್ತು ೧ ಅಂದರೆ ಟೋಟಲ್ ಎರಡು 'ಸಿ' ಅಂಡ್ 'ಡಿ'ನಲ್ಲಿ ಉತ್ತಮವಾಗಿದೆ ೨೦ಕ್ಕೆ ೨೦ ಪರಿಶಿಷ್ಟ, ಜಾತಿ ೫ ಪರಿಶಿಷ್ಟವರ್ಗ, ೧೦೩ಕ್ಕೆ 'ಡಿ'ನಲ್ಲಿ ೨೦ ಪರಿಶಿಷ್ಟ ಜಾತಿ ೬ ಪರಿಶಿಷ್ಟವರ್ಗ ಈ ರೀತಿ ಸಿ ಅಂಡ್ ಡಿ ನಲ್ಲಿ ಸಾಕಷ್ಟು ಪ್ರಾತಿನಿಧ್ಯ ಇದೆ. ಆದರೆ ಮೇಲ್ವರ್ಗದಲ್ಲಿ ಇಲ್ಲಿ. ಕಾರಣ ಇಷ್ಟೆ, ಮೇಲಿನವರ್ಗದಲ್ಲಿ ಯಾವುದೂ ರಿಕ್ರೂಟ್‌ಮೆಂಟ್ ಆಗಿಲ್ಲ 'ಎ' ಅಂಡ್ 'ಬಿ'ಗೆ ಆಗಿಲ್ಲ. ಮುಂದೆ ಬಡ್ತಿ ಸಮಯದಲ್ಲಿ ಅವಕಾಶ ಸಿಕ್ಕಿದಾಗ ಅವರಿಗೆ ಸಿಕ್ಕಿಯೇ ಸಿಗುತ್ತದೆ. ಮತ್ತೊಂದು ವಿಚಾರವನ್ನು ಹೇಳಿದರು ಏನೆಂದರೆ ದಲಿತ ಸಂಘರ್ಷ ಸಮಿತಿಯವರು ಸ್ಟೈಕ್ ಮಾಡಿದ್ದಾರೆ ಎಂದು. ಅವರು ಸ್ಟೈಕ್ ಮಾಡಿದ್ದು ಈ ಉದ್ದೇಶಕ್ಕೆ ಅಲ್ಲ ಯಾವುದೇ ಇಲಾಖೆಯಲ್ಲಿ ವರ್ಗೀಕರಣ ಆಗಬೇಕಾಗುತ್ತದೆ. ೫–೬–೭೦ ವರ್ಷಗಳಿಂದ ಇರುವವರು ಇದ್ದಾರೆ. ಈ ಇಲಾಖೆಯ ವಹಿವಾಟು ಬೆಂಗಳೂರು ನಗರಕ್ಕೆ ಸೀಮಿತವಾಗಿಲ್ಲ. ನಗರಾಭಿವೃದ್ಧಿ ಪ್ರಾಧಿಕಾರ ಮಾಡಿದಮೇಲೆ ಎಲ್ಲಾ ಜಿಲ್ಲೆ ಕೇಂದ್ರಗಳಿಗೆ ನಾವು ಇಂದಿನ್ನು ವರ್ಗೀಕರಣ ಮಾಡಬೇಕಾಗುತ್ತದೆ ಇಂತಹ ಸಮಯದಲ್ಲಿ ಪ್ರತಿಭಟನೆ ಬರುತ್ತದೆ, ನನಗೆ ಗೊತ್ತಿದೆ, ನನ್ನ ಹತ್ತಿರವೂ ಅವರು ಬಂದಿದ್ದರು. ಅವರು ಹೇಳಿದರು ಏನೆಂದರೆ ಐದು ವರ್ಷಗಳಿಂದ ಹೆಚ್ಚು ಬೇರೆಯವರು ಇದ್ದಾರೆ, ನಮ್ಮವರನ್ನು ಏಕೆ ಮಾಡಬೇಕು ಎಂದು. ಅವರಿಗೆ ನಾನು ಹೇಳಿದ್ದೇನೆ ಏನೆಂದರೆ ಐದು ವರ್ಷಗಳ ಮೇಲೆ ಯಾರೇ ಇರಲಿ ಅವರು ಇವರು ಅಂತ ನಾವು ಪ್ರತ್ಯೇಕ ಮಾಡುವುದಿಲ್ಲ. ಪ್ರತಿಯೊಬ್ಬರನ್ನೂ ವರ್ಗೀಕರಣ ಮಾಡುತ್ತೇವೆ. ಇದು ಅಗತ್ಯವಾಗಿದೆ. ಈಗ ೨೧ ಪ್ರಾಧಿಕಾರಗಳನ್ನು ಮಾಡಿದ್ದೇವೆ. ಪ್ರತಿಯೊಂದು ಜಿಲ್ಲೆಗೂ ಹೋಗಬೇಕಾಗುತ್ತದೆ. ಬೆಂಗಳೂರಿನಲ್ಲಿಯೇ ಬೇಕು ಎಂಬ ಕಾರಣಕ್ಕೂ ಇಸ್ಕರ ಪ್ರತಿಭಟನೆ ಆಗುತ್ತಿದೆ ಹೊರತಾಗಿ ಬೇರೆ ಕಾರಣಕ್ಕಾಗಿ ಅಲ್ಲ. ಈ ಅಧಿಕಾರಿಯ ಬಗ್ಗೆ ಹೇಳಿದ್ದಾರೆ. ಹೌದು ಈತ ಒಬ್ಬ ನಿಷ್ಠೂರವಾದಂಥ ಅಧಿಕಾರಿ. ಯಾವುದೇ ನಿಯಮಾವಳಿಯನ್ನು ಕಟ್ಟುನಿಟ್ಟಾಗಿ ಪಾಲನೆ ಮಾಡತಕ್ಕಂಥ ಒಬ್ಬ ಅಧಿಕಾರಿ ಯಾವತ್ತೂ ನಿಷ್ಠೂರವಾದಿ ಲೋಕವಿರೋಧಿ ಎಂದು ಗಾದೆಯೇ ಇದೆ. ಅದಕ್ಕೆ ತಕ್ಕಂತೆ ನಾನಾ ರೀತಿಯಲ್ಲಿ ಅಲ್ಲಿ ಸಿಬ್ಬಂದಿ ವರ್ಗದ ಕೆಲವರು ಕಿರಿಕಿರಿ ಕೊಡುತ್ತಿದ್ದಾರೆ ಮತ್ತು ಸರ್ಕಾರದ ಮೇಲ್ಮಟ್ಟದಲ್ಲಿ ಕೂಡ ಅವರ ನಿಷ್ಠೂರವಾದವನ್ನು ಕೆಲವರಿಗೆ ಒಪ್ಪಿಕೊಳ್ಳುವುದಕ್ಕೆ ಆಗಿಲ್ಲ. ಹೀಗೆ ಆಗುವುದಕ್ಕೆ ಶಾಸಕರು ಕೂಡ ಕಾರಣರಾಗುತ್ತಾರೆ. ಈ ಒಗ್ಗೆ ಈ ಪನಿಯಲ್ಲಿ ನಾನಾಸಾರಿ ಚರ್ಚೆಗೆ ಬಂದಿದೆ. ಇದಕ್ಕೆ ಕಾರಣ ಇಷ್ಟೆ, ಒಬ್ಬ ಮೇಲ್ಮಟ್ಟಕ್ಕೆ ಹೋಗಿರತಕ್ಕಂಥ ಅಧಿಕಾರಿ ಇವರು, ಇವರಿಗೆ ಬೇರೆ ವರ್ಗೀಕರಣಕ್ಕೆ ಅವಕಾಶ ಇಲ್ಲ. ಅವರನ್ನು ಮತ್ತೊಂದು ಬೇರೆ ಇಲಾಖೆಗೆ ಕಳಿಸಬಹುದಾಗಿತ್ತು. ಆದರೆ ಕೆಲವು ತಾಂತ್ರಿಕ ಕಾರಣದಿಂದ ವರ್ಗೀಕರಣ ಮಾಡದೇ ಇರಬೇಕಾಗಿದೆ. ಇದು ಅವರಿಗೂ ಇಚ್ಛೆಯಿಲ್ಲ ಆದ್ದರಿಂದ ಸಂದರ್ಭ ಹೀಗೆ ಇದೆ. ಇದ್ದರಿಂದ ಪ್ರತಿಭಟನೆಯನ್ನು ವರ್ಗೀಕರಣಕ್ಕೋಸ್ಕರ ಮಾಡುತ್ತಿದ್ದರೆಯೇ ಹೊರತು ಬೇರೆಯದಕ್ಕಲ್ಲ. ನಾನು ಆಗಲೇ ಹೇಳಿದ್ದೇನೆ, ಯಾವರೀತಿ ಮುಂದೆ ನೇಮಕಾತಿ ಮಾಡುವ ಸಮಯದಲ್ಲಾಗಲೀ, ಬಡ್ತಿ ನೀಡುವ ಸಮಯದಲ್ಲಾಗಲೀ ಪೂರ್ಣವಾಗಿ ಅವರಿಗೆ ಅವಕಾಶ ಮಾಡಿಕೊಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಮಂತ್ರಿಗಳು ಉತ್ತರ ಕೊಟ್ಟ ದಲಿತ ಸಂಘರ್ಷಸಮಿತಿಯವರು ನಾನು ಹೇಳಿದ ಕಾರಣಕ್ಕೋಸ್ಕರ ಅಲ್ಲ, ಬೇರೆ ಉದ್ದೇಶದಿಂದ ಪ್ರತಿಭಟನೆ ಮಾಡಿದ್ದಾರೆ ಎಂದು ಹೇಳಿದರು ಅವರ ಉದ್ದೇಶವನ್ನು ಇಲ್ಲಿ ಪ್ರಿಂಟ್ ಮಾಡಿದ್ದಾರೆ. ೧ ಮಿಸಲಾತಿ ಹುದ್ದೆಗಳನ್ನು ನಿಯಮಾನುಸಾರವಾಗಿ ಎಲ್ಲ ಹಂತಗಳಲ್ಲೂ ತುಂಬಬೇಕು. ೨. ಇಲಾಖೆಯು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಕ್ಷೇಮಾಭಿವೃದ್ಧಿ ಸಂಘದ ಪದಾಧಿಕಾರಿಗಳ ವರ್ಗೀಕರಣೆಯನ್ನು ಕೂಡಲೇ ರದ್ದು ಮಾಡಬೇಕು. ೩. ಜಾತೀಯತೆ, ಸ್ವಜನಪಕ್ಷಪಾತ ದುರಾಡಳಿತ ಆರೋಪ ಹೊತ್ತಿರುವ ನಿರ್ದೇಶಕರನ್ನು ಅನ್ಯ ಆವರನ್ನು ವಜಾ ಮಾಡಿ ಮತ್ತು ಮುಖ್ಯಮಂತ್ರಿಗಳ ಆದೇಶವನ್ನು ಉಲ್ಲಂಘಿಸಿದ ನಿರ್ದೇಶಕರ ಮೇಲೆ ಕ್ರಮ ಜರುಗಿಸಿ ಅಂತ ಹೇಳಿ ನಾಲ್ಕು ಬೇಡಿಕೆಗಳನ್ನು ಇಟ್ಟಿದ್ದಾರೆ. ಇವರಲ್ಲಿ ಯಾವುದು ಸಮಂಜಸವಾಗಿದೆ, ಯಾವುದು ಸಮಂಜಸ ಅಲ್ಲ ಎನ್ನುವುದನ್ನು ತಮಗೇ ಬಿಟ್ಟಿದ್ದೇನೆ.

ಶ್ರೀ ಎಂ. ಚಂದ್ರಶೇಖರ್.—ಮಾನ್ಯ ಬಸವಲಿಂಗಪ್ಪನವರು ಹಿರಿಯ ಸದಸ್ಯರು, ಜೊತೆಗೆ ಮಂತ್ರಿಗಳಾಗಿದ್ದವರು. ಒಬ್ಬ ಡೈರಕ್ಟರನ್ನು ವರ್ಗ ಮಾಡಿದ್ದರಿಂದ ಇವತ್ತು ಮುಖ್ಯಮಂತ್ರಿಗಳ

ಆದೇಶ ಉಲ್ಲಂಘನೆ ಆಗಿಲ್ಲ. ಒಬ್ಬ ಅಧಿಕಾರಿಯನ್ನು ವರ್ಗಾವಣೆ ಮಾಡಿರುವುದು ಉಂಟು. ಮುಖ್ಯ ಮಂತ್ರಿಯವರ ಕಛೇರಿಯಿಂದ ಬಂದಿರತಕ್ಕ ಕಾರಣದಿಂದ ಮಾಡಿದೆಯೇ ಹೊರತು, ಅದು ಅದಕ್ಕೂಸ್ಕರ ಅಲ್ಲ.

ಶ್ರೀ ಬಿ. ಬಸವಲಿಂಗಪ್ಪ.—ನಾನು ಹೇಳಿದ್ದೇನೆ, ಯಾವುದು ಸಮಂಜಸವೋ ಅದನ್ನು ಮಾಡಿ ಎಂದು ಹೇಳುತ್ತೇನೆ. ಒಂದು ಮಾತು ಹೇಳುತ್ತಿದ್ದೇನೆ, ''ಎ'' ತರಗತಿ ಮತ್ತು ಬಿ ತರಗತಿ, ಅಲ್ಲಿ ತಾವು ಒಪ್ಪಿದ ಪ್ರಕಾರ, ಈ ೮೬ ಜನ ದೊಡ್ಡ ಹುದ್ದೆದಾರರು ಇರುವಾಗ, ಇಬ್ಬರು ಮಾತ್ರ ನಿಮ್ಮ ವರ್ಗದವರನ್ನು ನೇಮಕ ಮಾಡಿದ್ದೀರಿ, ಮತ್ತೆ ''ಎ'' ನಲ್ಲಿ ೬೧ ಅಧಿಕಾರಿಗಳು ಇರುವಾಗ, ಇಬ್ಬರನ್ನು ಮಾತ್ರ ನೇಮಕ ಮಾಡಿದ್ದೀರಿ. ಕೇಂದ್ರಸರ್ಕಾರದ ಸರ್ಕ್ಯುಲರ್‌ನ್ನು ಈ ಸರ್ಕಾರವೂ ಒಪ್ಪಿದೆ. ಈ ಹುದ್ದೆಗಳನ್ನು ತುಂಬುವುದಕ್ಕೆ ನೇರವಾದ ರೆಕ್ರೂಟ್‌ಮೆಂಟ್ ಮಾಡಬೇಕೆಂದು ಹೇಳಿದ್ದಾರೆ, ಸ್ಪೆಷಲ್ ರೆಕ್ರೂಟ್‌ಮೆಂಟ್ ಎಂದು ಹೇಳಿದ್ದಾರೆ, ದಯವಿಟ್ಟು ಮಾಡುತ್ತೀರಾ ? ಇವರನ್ನು ತುಂಬುವುದಕ್ಕೆ ಈ ರೀತಿ ಮಾಡದೇಹೋದರೆ, ತಾವು ಏನು ಮಾಡುತ್ತೀರಿ ಎಂಬುದನ್ನು ಹೇಳಿ.

ಶ್ರೀ ಎಂ. ಚಂದ್ರಶೇಖರ್.—ಇದನ್ನು ಕರ್ನಾಟಕ ಲೋಕ ಸೇವಾ ಆಯೋಗದವರು ಮಾಡಬೇಕು. ನೇರ ನೇಮಕಗಳನ್ನು ಯಾವ ಯಾವ ಹುದ್ದೆಗಳಿಗೆ ನೇಮಕ ಮಾಡಬಹುದು, ಈ ಒಂದೇ ಇಲಾಖೆಯಲ್ಲ, ಅನೇಕ ಇಲಾಖೆಗಳಲ್ಲಿ ಇವೆ. ಇದು ಪರಿಶೀಲಿಸುವಂತಾದ್ದು ಈ ಕಾರಣ ಇವತ್ತು ಖಾಲಿ ಇರುವಂಥ, ಜಾಗಗಳಿಗೆ ಹೊಸ ನೇಮಕಗಳನ್ನು ನೇರವಾಗಿ ಮಾಡಬೇಕೇ, ಅಥವಾ ಬಡ್ತಿ ಮಾಡಬೇಕೇ ಎಂಬುದನ್ನು ಪರಿಶೀಲನೆ ಮಾಡಬೇಕಾಗಿದೆ.

3) ಮೈಸೂರು ಜಿಲ್ಲೆಯಲ್ಲಿ ಗ್ರಾಮಲೆಕ್ಕಿಗರ ಹುದ್ದೆಗೆ ಅಭ್ಯರ್ಥಿಗಳ ಆಯ್ಕೆ ಆಗಿ, ಕೆಲಸಕ್ಕೆ ಆದೇಶ ಕೊಡದಿರುವ ಬಗ್ಗೆ

ಶ್ರೀ ಡಿ. ಟಿ. ಜಯಕುಮಾರ್ (ನಂಜನಗೂಡು).—ಮಾನ್ಯ ಅಧ್ಯಕ್ಷರೇ, ಮೈಸೂರು ಜಿಲ್ಲೆಯ ಗ್ರಾಮ ಲೆಕ್ಕಿಗರ ಹುದ್ದೆಗೆ ಅಭ್ಯರ್ಥಿಗಳ ಆಯ್ಕೆ ಆಗಿ ಎರಡುವರ್ಷಗಳಾಗಿದ್ದರೂ ಇನ್ನೂ ಕೆಲಸಕ್ಕೆ ತೆಗೆದುಕೊಳ್ಳಲು ಸರ್ಕಾರವು ಆದೇಶ ನೀಡದೇ ಇರುವುದರಿಂದ ಆಗಿರುವ ತೊಂದರೆ ಬಗ್ಗೆ ಕಂದಾಯ, ಯೋಜನೆ ಮತ್ತು ನೀರಾವರಿ ಮಂತ್ರಿಯವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ, ಯೋಜನೆ ಮತ್ತು ನೀರಾವರಿ ಮಂತ್ರಿ),—

ಮಾನ್ಯ ಅಧ್ಯಕ್ಷರೇ, ಮೈಸೂರು ಜಿಲ್ಲೆಯಲ್ಲಿ ೧೧೫ ಗ್ರಾಮಲೆಕ್ಕಿಗರ ಹುದ್ದೆಗಳ ಆಯ್ಕೆಗಾಗಿ ಸಂದರ್ಶನ ನಡೆಸಿರುವುದು ನಿಜ. ಇತ್ತೀಚಿನ ಸರ್ಕಾರಿ ಆದೇಶ ಕ್ರಮಾಂಕ ಆರ್‌ಡಿ ೧೯೦ ಬಿಎಸ್‌ಸಿ ೮೭, ದಿನಾಂಕ ೨.೪.೧೯೮೮ರ ಅನ್ವಯ ಮಂಡಲ ಪಂಚಾಯಿತಿ ರಚನೆಗಳ ತತ್ವರಿಣಾಮವಾಗಿ ಮೈಸೂರು ಜಿಲ್ಲೆಗೆ ಸಂಬಂಧಿಸಿದಂತೆ ಕಂದಾಯ ವೃತ್ತಗಳನ್ನು ವಿಸ್ತರಿಸಿ ಸುಮಾರು ೨೦೫ ಗ್ರಾಮಲೆಕ್ಕಿಗರ ಹುದ್ದೆಗಳನ್ನು ಕಡಿಮೆಗೊಳಿಸಲಾಗಿದೆ.

ದಿನಾಂಕ ೧.೪.೧೯೮೭ ರಿಂದ ಅನುಷ್ಠಾನಕ್ಕೆ ಬಂದ ಮಂಡಲ ಪಂಚಾಯಿತಿಗಳ ರಚನೆಯಿಂದಾಗಿ ಕಂದಾಯ ಇಲಾಖೆಯ ೭೧೯ ಪ್ರಥಮ ದರ್ಜೆ ಸಹಾಯಕರನ್ನು ರಾಜ್ಯದಲ್ಲಿ ಪ್ರತಿಯೋಜನೆ ಮೇಲೆ ಮಂಡಲ ಪಂಚಾಯತ್ ಕಾರ್ಯದರ್ಶಿ ಹುದ್ದೆಗಳಿಗೆ ನೇಮಕ ಮಾಡಲಾಗಿದ್ದು, ತತ್ಪರಿಣಾಮವಾಗಿ ಉದ್ಭವಿಸಿರುವ ಖಾಲಿ ಹುದ್ದೆಗಳಿಗೆ ನೇರ ನೇಮಕಾತಿಯನ್ನು ತೊಡೆದು ಹಾಕಿ ಖಾಲಿ ಆದ ಗ್ರಾಮಲೆಕ್ಕಿಗರು ಮತ್ತು ದ್ವಿತೀಯ ದರ್ಜೆ ಸಹಾಯಕರಿಗೆ ೬೦.೪೦ ರ ಅನುಪಾತದಲ್ಲಿ ಮುಂಬಡ್ತಿ ನೀಡಲು ಪ್ರಸ್ತುತ ವೃಂದ ಮತ್ತು ನೇಮಕಾತಿ ನಿಯಮಗಳಿಗೆ ತಾತ್ಕಾಲಿಕ ಕಿದ್ದುಪಡಿಯನ್ನು ದಿನಾಂಕ ೨೯-೩-೧೯೮೮ ರಂದು ಮಾಡಲಾಗಿದೆ. ಹೀಗೆ ಖಾಲಿ ಗ್ರಾಮಲೆಕ್ಕಿಗರಿಗೆ ಬಡ್ತಿ ನೀಡುವ ಮೂಲಕ ತೆರವಾಗುವ ಹುದ್ದೆಗಳಿಗೆ, ಆಯ್ಕೆಯಾದ ಅಭ್ಯರ್ಥಿಗಳನ್ನು ಭರ್ತಿ ಮಾಡುವ ಸಾಧ್ಯತೆಯನ್ನು ತೀವ್ರವಾಗಿ ಪರಿಶೀಲಿಸಲಾಗುತ್ತಿದೆ. ಮಾನ್ಯ ಅಧ್ಯಕ್ಷರೇ, ಈ ಬಗ್ಗೆ ನಾನು ಸಭೆಯಲ್ಲಿ ಅನೇಕ ಸಲ ಹೇಳಿದ್ದೇನೆ. ಈ ಮಂಡಲ್ ಪಂಚಾಯ್ತಿಗಳು ಅಸ್ತಿತ್ವಕ್ಕೆ ಬಂದಮೇಲೆ ಅನೇಕ ಜನ ಗ್ರಾಮ ಲೆಕ್ಕಿಗರು ಮಂಡಲ್ ಪಂಚಾಯ್ತಿ ಕೆಲಸವನ್ನು ಮಾಡುತ್ತಿದ್ದರು. ಈಗ ಈ ಕೆಲಸವನ್ನು ಮಾಡುವ ಅವಶ್ಯಕತೆ ಇಲ್ಲ, ಇಡೀ ರಾಜ್ಯದ ತುಂಬ ಒಂದು ಉಳತಾಫಿಯದ ದೃಷ್ಟಿಯಿಂದ ಮತ್ತು ಕೆಲಸದ ದೃಷ್ಟಿಯಿಂದ